# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 466 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 20.02.2023 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಶಾಲಾ ಮಕ್ಕಳಿಗೆ ಸಮವಸ್ತ್ರ, ಶೂ, ಕಾಲು ಚೀಲ ಮತ್ತು ಸೈಕಲ್ ವಿತರಿಸಲು ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; ಈ ಯೋಜನೆಗಳ ರೂಪ-ರೇಷೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ವಿದ್ಯಾ ವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ, ಶೂ ಮತ್ತು ಸಾಕ್ಸ್ ಹಾಗೂ ಬೈಸಿಕಲ್ ವಿತರಿಸಲಾಗುತ್ತಿದೆ.<br><br>**ಸಮವಸ್ತ್ರ :-**<br>ವಿದ್ಯಾ ವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ವಿತರಿಸಲಾಗುತ್ತಿದೆ.<br>ಈ ಯೋಜನೆಯಡಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮಗಳಿಂದ ಸದರಿ ಸಂಸ್ಥೆಗಳ ಸಾಮರ್ಥ್ಯಕ್ಕನುಗುಣವಾಗಿ ಸಮವಸ್ತ್ರ ಬಟ್ಟೆಗಳನ್ನು ಖರೀದಿ ಮಾಡಲಾಗುತ್ತಿದೆ ಹಾಗೂ ಉಳಿದ ಪ್ರಮಾಣವನ್ನು ಇ-ಟೆಂಡರ್ ಮೂಲಕ ಖರೀದಿ ಮಾಡಿ ಮಕ್ಕಳಿಗೆ ವಿತರಿಸಲಾಗುತ್ತದೆ.<br><br>**ಶೂ ಮತ್ತು ಸಾಕ್ಸ್:-**<br>ವಿದ್ಯಾ ವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತವಾಗಿ ಶೂ ಮತ್ತು ಸಾಕ್ಸ್ ವಿತರಿಸಲಾಗುತ್ತಿದೆ.<br>ಪ್ರಸ್ತುತ, ಈ ಯೋಜನೆಯಡಿಯಲ್ಲಿ 1 ರಿಂದ 10ನೇ ತರಗತಿಯ ಸರ್ಕಾರಿ ಶಾಲಾ ಮಕ್ಕಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ಖರೀದಿ ಮಾಡಿ ವಿತರಿಸಲು ಮಕ್ಕಳ ದಾಖಲಾತಿಯನುಸಾರ ಶಾಲಾ ಎಸ್.ಡಿ.ಎಂ.ಸಿ ಖಾತೆಗಳಿಗೆ ಈ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>ಕ್ರ.ಸಂ / ತರಗತಿ / ಮೊತ್ತ<br>1 / 1 ರಿಂದ 5 / ರೂ.265/-<br>2 / 6 ರಿಂದ 8 / ರೂ.295/-<br>3 / 9 ಮತ್ತು 10 / ರೂ.325/-<br><br>ಮೇಲೆ ತಿಳಿಸಿರುವಂತೆ ಬಿಡುಗಡೆ ಮಾಡಲಾದ ಅನುದಾನವನ್ನು ಸಂಬಂಧಿಸಿದ ಶಾಲಾ ಎಸ್.ಡಿ.ಎಂ.ಸಿ ಸಮಿತಿಯು ಖರೀದಿ ಮಾಡಿ ವಿತರಣೆ ಮಾಡುತ್ತಾರೆ. |

**ಬೈಸಿಕಲ್:-**

ವಿದ್ಯಾವಿಕಾಸ ಯೋಜನೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ಎಲ್ಲಾ ಮಕ್ಕಳಿಗೆ (ವಸತಿ ಶಾಲೆಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ವಿದ್ಯಾರ್ಥಿನಿಲಯದ ಮಕ್ಕಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿನ ಮಕ್ಕಳು ಮತ್ತು ಬಸ್ ಪಾಸ್ ಹೊಂದಿರುವ ಮಕ್ಕಳನ್ನು ಹೊರತುಪಡಿಸಿ), ಗುಡ್ಡಗಾಡು ಪ್ರದೇಶದಲ್ಲಿ ಬಸ್ ಹತ್ತುವ ಸಲುವಾಗಿ ದೂರ ನಡೆದುಕೊಂಡು ಬರುವಂತಹ ಬಸ್ ಪಾಸ್ ಹೊಂದಿರುವ ವಿದ್ಯಾರ್ಥಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧೀನದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳಲ್ಲಿ ವಾಸವಿದ್ದು, ಸರ್ಕಾರಿ ಅಥವಾ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಉಚಿತವಾಗಿ ಬೈಸಿಕಲ್‌ಗಳನ್ನು ವಿತರಿಸಲಾಗುತ್ತಿತ್ತು.

ಆ). ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಅಡಿ ಸರ್ಕಾರ ಒದಗಿಸಿದ ಅನುದಾನವೆಷ್ಟು; (ಕಳೆದ 3 ವರ್ಷಗಳ ಖರ್ಚು-ವೆಚ್ಚಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು)

**ಸಮವಸ್ತ್ರ :-**

ಕಳೆದ ಮೂರು ವರ್ಷಗಳಲ್ಲಿ ಸಮವಸ್ತ್ರ ಸರಬರಾಜು ಯೋಜನೆಯಡಿ ಒದಗಿಸಿದ ಹಾಗೂ ಖರ್ಚಾದ ಅನುದಾನದ ವಿವರ ಕೆಳಗಿನಂತಿದೆ.

| ಕ್ರಸಂ | ವರ್ಷ | ಒದಗಿಸಿದ ಅನುದಾನ (ರೂ ಕೋಟಿಗಳಲ್ಲಿ) | ಖರ್ಚಾದ ಅನುದಾನ (ರೂ ಕೋಟಿಗಳಲ್ಲಿ) |
|---|---|---|---|
| 1 | 2019-20 | ರೂ.72.35 | ರೂ.72.35 |
| 2 | 2020-21 | ರೂ.77.76 | ರೂ.77.76 |
| 3 | 2021-22 | ರೂ.79.60 | ರೂ.79.60 |

**ಶೂ ಮತ್ತು ಸಾಕ್ಸ್ :-**

ಕಳೆದ ಮೂರು ವರ್ಷಗಳಲ್ಲಿ ಶೂ ಮತ್ತು ಸಾಕ್ಸ್ ಖರೀದಿ ಯೋಜನೆಯಡಿ ಒದಗಿಸಿದ ಹಾಗೂ ಖರ್ಚಾದ ಅನುದಾನದ ವಿವರ ಕೆಳಗಿನಂತಿದೆ.

| ಕ್ರಸಂ | ವರ್ಷ | ಒದಗಿಸಿದ ಅನುದಾನ (ರೂ ಕೋಟಿಗಳಲ್ಲಿ) | ಖರ್ಚಾದ ಅನುದಾನ (ರೂ ಕೋಟಿಗಳಲ್ಲಿ) |
|---|---|---|---|
| 1 | 2019-20 | ರೂ.126.00 | ರೂ.123.65 |
| 2 | 2020-21 | ಕೋವಿಡ್-19ರ ಹಿನ್ನಲೆಯಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ | |
| 3 | 2021-22 | ಕೋವಿಡ್-19ರ ಹಿನ್ನಲೆಯಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ | |

**ಬೈಸಿಕಲ್:-**

ಕಳೆದ ಮೂರು ವರ್ಷಗಳಲ್ಲಿ ಉಚಿತ ಬೈಸಿಕಲ್ ಖರೀದಿ ಯೋಜನೆಯಡಿ ಒದಗಿಸಿದ ಹಾಗೂ ಖರ್ಚಾದ ಅನುದಾನದ ವಿವರ

<table>
<tr>
<td></td>
<td></td>
<td>ಕೆಳಗಿನಂತಿದೆ.<br>
<table>
<tr><th>ಕ್ರಸಂ</th><th>ವರ್ಷ</th><th>ಒದಗಿಸಿದ ಅನುದಾನ ರೂ. ಕೋಟಿಗಳಲ್ಲಿ)</th><th>ಖರ್ಚಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><td>1</td><td>2019–20</td><td>ರೂ.203.00</td><td>ರೂ.186.24</td></tr>
<tr><td>2</td><td>2020–21</td><td colspan="2">ಕೋವಿಡ್–19ರ ಹಿನ್ನಲೆಯಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ</td></tr>
<tr><td>3</td><td>2021–22</td><td colspan="2">ಕೋವಿಡ್–19ರ ಹಿನ್ನಲೆಯಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ</td></tr>
</table>
</td>
</tr>
<tr>
<td>ಇ)</td>
<td>ರಾಜ್ಯ ಉಚ್ಚ ನ್ಯಾಯಾಲಯ ರಾಜ್ಯ ಸರ್ಕಾರ ಶಾಲಾ ಮಕ್ಕಳಿಗೆ ಸಮವಸ್ತ್ರ, ಶೂ ಮತ್ತು ಕಾಲು ಚೀಲಗಳನ್ನು ಶೈಕ್ಷಣಿಕ ವರ್ಷ ಮುಗಿಯುತ್ತಾ ಬಂದಿದ್ದರೂ, ನೀಡದೆ ಇರುವುದಕ್ಕೆ ಛೀಮಾರಿ ಹಾಕಿರುವುದು ನಿಜವೇ, ಹಾಗಿದ್ದಲ್ಲಿ, ರಾಜ್ಯ ಉಚ್ಚ ನ್ಯಾಯಾಲಯದ ನಿರ್ದೇಶನದ ಮೇಲೆ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)</td>
<td>ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠದಲ್ಲಿ ದಾಖಲಾಗಿರುವ ನ್ಯಾಯಾಂಗ ನಿಂದನಾ ಸಂಖ್ಯೆ: CCC 245/2020ರಲ್ಲಿ ಪ್ರಕರಣ ಸಂಖ್ಯೆ: WCB No. 13751 of 2019 ದಿನಾಂಕ : 28–08–2019ರ ಆದೇಶದಂತೆ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಮತ್ತು 2 ಜೊತೆ ಕಾಲು ಚೀಲಗಳನ್ನು ನೀಡಿರುವ ಬಗ್ಗೆ ಮಾಹಿತಿ ಕೇಳಿದ್ದು, ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿ ಸ್ಪಷ್ಟೀಕರಣ/ಧೃಢೀಕರಣ ನೀಡಲಾಗಿದೆ.</td>
</tr>
</table>

**ಇಪಿ: 16 ಎಂಪಿಇ 2023.**

(ಬಿ.ಸಿ.ನಾಗೇಶ್)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**
**ಹಾಗೂ ಸಕಾಲ ಸಚಿವರು**